# ಸಪ್ನೋಂಕೀ ರಾಣಿ...

ನನ್ನೂರು ಹರಪನಹಳ್ಳಿಯಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿದ್ದೆ. ಬೆಂಗಳೂರಿನಲ್ಲಿ ಓದುವವರೆಲ್ಲ ಬುದ್ಧಿವಂತರು ಎಂಬ ಭ್ರಾಂತು! ಅಪ್ಪನಲ್ಲಿ ಕಾಡಿಬೇಡಿ ಅಂತೂ ಇಂತೂ ಬೆಂಗಳೂರಿನ ಬಸ್ ಹತ್ತಿದೆ. ಪ್ರಸಿದ್ಧ ಕಾಲೇಜಿನಲ್ಲಿ ಸೀಟು ಸಿಕ್ಕಿತು. ಹಾಸ್ಟೆಲಲ್ಲಿ ಊಟ ವಸತಿಗೆ ವ್ಯವಸ್ಥೆಯಾಯಿತು.

ಮೊದಲ ದಿನ ಕಾಲೇಜು ಮೆಟ್ಟಿಲು ಹತ್ತುತ್ತಿರುವ ಸಂಭ್ರಮ. ಹೊಸ ಪ್ಯಾಂಟ್, ಹಾಫ್ ಶರ್ಟ್ ಧರಿಸಿ ತಲೆಗೆ ಎಣ್ಣೆ ಹಚ್ಚಿ ಮುಖಕ್ಕೆ ಕೊಂಚ ಪೌಡರ್ ತೆಳುವಾಗಿ ಸವರಿ ದೇವರ ಫೋಟೊಗೆ ಕೈಮುಗಿದು ಹೊರಟೆ. ಕಾಲೇಜು ಬಾಗಿಲಲ್ಲಿ ನಾನಾ ತೆರನ ವಿದ್ಯಾರ್ಥಿಗಳು. ಎಲ್ಲರೂ ಠಸ್ ಪುಸ್ ಎಂದು ಇಂಗ್ಲಿಷ್ ಮಾತನಾಡುವವರೇ! ತರಗತಿಯಲ್ಲಿ ಲೆಕ್ಚರರ್ ಸೇರಿ ಎಲ್ಲರೂ ಇಂಗ್ಲಿಷ್! ದೇವರೇ, ನಾನು ಕನ್ನಡ ಮೀಡಿಯಂ ಓದಿ ಪಾಸಾದವನು. ಇಲ್ಲಿ ಹೇಗೆ ನಿಭಾಯಿಸಲಿ? ನನಗಾಗಲೇ ಕೀಳರಿಮೆ ಕಾಡಿತ್ತು.



ಮರುದಿನ ತರಗತಿಗಳಿನ್ನೂ ಆರಂಭವಾಗಿರಲಿಲ್ಲ. ಕಾರಿಡಾರಿನಲ್ಲಿ ನಿಂತಿದ್ದೆ. ಎದುರಿಗೆ ನಾಲ್ಕಾರು ಹುಡುಗಿಯರು ಬಂದರು. ಅಬ್ಬಾ! ಮಿಂಚೊಂದು ಬಳಿ ಬಂದಂಥ ಅನುಭವ! ಎಂಥಾ ಸುಂದರಿಯವಳು! ಆಗಿನ್ನೂ ಬಿಡುಗಡೆಯಾಗಿದ್ದ 'ಸಪ್ನೋಂಕಾ ಸೌದಾಗರ್' ಚಿತ್ರದ ಹೇಮಾಮಾಲಿನಿಯ ತದ್ರೂಪು. ನನ್ನ ಹೃದಯವೀಣೆ ಜೋರಾಗಿಯೇ ಮಿಡಿದಿತ್ತು. ಅರೆ! ಅವಳದು ನಮ್ಮದೇ ಸೆಕ್ಷನ್! ಕನ್ನಡ ಮಾಸ್ತರರು ಹಾಜರಿ ಹಾಕುವಾಗ ತಿಳಿಯಿತು. ಅವಳ ಹೆಸರು ಸಂಧ್ಯಾ... ನಿಜಕ್ಕೂ ಸಂಧ್ಯಾಕಾಲದ ಸುಂದರ ಚಂದಿರ ಅವಳು.

ಚಿಗುರು ಮೀಸೆ ಮೂಡುವ, ಜಗವೆಲ್ಲ ಹಸಿರು ಹಸಿರಾಗಿ ಕಾಣುವ ವಯಸ್ಸದು. ಮನದಲ್ಲಿ ಪ್ರೀತಿ ಚಿಗುರೊಡೆದಿತ್ತು. ನಂತರ ಆಗಾಗ ಅವಳೆದುರು ಸುಮ್ಮನೆ ಎದುರಾದಂತೆ ತಿರುಗುತ್ತಿದ್ದೆ. ಒಮ್ಮೆ ಅವಳು ಬಹುಶಃ ಸಹಪಾಠಿ ಎಂದೋ ಏನೋ ತುಟಿಯಂಚಿನಲ್ಲಿ ಕಿರುನಗೆ ನಕ್ಕಾಗ ನನಗೆ 'ಗಗನವು ಎಲ್ಲೋ, ಭೂಮಿಯು ಎಲ್ಲೋ!'...

ಅದೇಕೋ ಈ ಪ್ರೀತಿ ಏಕಮುಖಿಯಾಗುತ್ತಿದೆಯೆಂಬ ಭಾವನೆ ಬಲಿಯಲಾರಂಭಿಸಿತು. ಏನೇ ಆಗಲಿ, ಒಂದು ಪ್ರೇಮಪತ್ರ ಬರೆದು ಅವಳ ಕೈಗೆ ಕೊಟ್ಟು ಪರೀಕ್ಷೆ ಮಾಡೋಣವೆಂದು ಬರೆದೆ. ನನ್ನ ಹೆಸರು, ತರಗತಿ, ಪ್ರವರಗಳನ್ನೆಲ್ಲ ಬರೆದು ಮುಂದುವರೆಸಿದೆ.

'ನನ್ನೊಲವಿನ ಚಿಂಗಾರಿ, ಕಿನ್ನರಿ, ನಿತ್ಯ ಕನಸಲ್ಲಿ ಬರುತ್ತಿರುವ ಬೆಳದಿಂಗಳ ಬಾಲೆ, ನೀನೇ ನನ್ನ ಒಲವಿನ ಪ್ರಿಯಲತೆ ಎಂದು ನನ್ನ ಹೃದಯ ಪಿಸುಗುಟ್ಟುತ್ತಿದೆ. ಎಂಥ ಚೆಂದ ನಿನ್ನ ವದನಾರವಿಂದ! ನೀನೇ ನನ್ನ ಜಗತ್ತು. ನಿನ್ನ ಕಣ್ಣುಗಳಿಗೆ ರೆಪ್ಪೆಯಾಗಬಯಸುವೆ...' ಎಂದು ಬರೆದು ಶೀಘ್ರ ಉತ್ತರಕ್ಕಾಗಿ ಬೇಡಿಕೆಯೊಂದಿಗೆ ಮುಗಿಸಿ ಅಂಟಿಸಿ ಮೇಲೆ ಅರ್ಧ ಗಂಟೆ ವ್ಯಯಿಸಿ ಸುಂದರ ಡಿಸೈನಲ್ಲಿ ಹೆಸರು ಬರೆದೆ.

ರಾತ್ರಿಯಿಡೀ ಬಣ್ಣಬಣ್ಣದ ಕನಸುಗಳು. ಮರುದಿನ ಕಾಲೇಜಿಗೆ ಹೋಗಲು ಸಿಟಿಬಸ್ ಹತ್ತಿದೆ. ನನ್ನ ಮುಂದಿನ ಸೀಟಿನಲ್ಲಿಯೇ ಸಂಧ್ಯಾ ಕುಳಿತಿದ್ದಳು. ಜೊತೆಗೊಬ್ಬ ಚಾಕೊಲೇಟ್ ಹೀರೊನಂಥ ಹುಡುಗ. ಕೀಟಲೆ ಮಾಡುತ್ತ ಅತಿ ಸಲುಗೆಯಿಂದ ವರ್ತಿಸುತ್ತಿದ್ದ. ಪಕ್ಕದಲ್ಲಿದ್ದ ಸಹಪಾಠಿ ಹೇಳಿದ– ಅವನು ಅವಳ ಮಾವನ ಮಗನಂತೆ. ಮುಂದೆ ಅವಳನ್ನು ಮದುವೆಯಾಗುವವನಂತೆ.

ನನ್ನ ಹೃದಯ ಒಡೆದು ಚೂರಾಗಿತ್ತು. ಪುಸ್ತಕದ ಮಧ್ಯೆಯಿದ್ದ ಪ್ರೇಮಪತ್ರವನ್ನು ತೆಗೆದು ಒಳಜೇಬಿನಲ್ಲಿಟ್ಟುಕೊಂಡೆ.

–ಕೆ. ಶ್ರೀನಿವಾಸರಾವ್, ಹರಪನಹಳ್ಳಿ

# ಪುಸ್ತಕದಲ್ಲೇ ಉಳಿದುಹೋಯ್ತು

ನಾನು ಪದವಿ ಓದುತ್ತಿದ್ದ ಸಂದರ್ಭದಲ್ಲಿ ಮೊಬೈಲುಗಳಿರಲಿಲ್ಲ. ಆಗ ಹಿತ್ತಲು, ಬಣವೆಗಳೇ ಪ್ರೇಮಿಗಳು ಸಂಧಿಸುತ್ತಿದ್ದ ತಾಣಗಳು. ಕಣ್ಣಲ್ಲೇ ಮಾತಾಡ್ತಿದ್ದ, ಮುಗುಳ್ನಗೆ, ಸ್ವಾಟೆ ತಿರುವುತ್ತಿದ್ದ, ಮೂಗು ಮುರಿತಿದ್ದ, ವಾರೆನೋಟಗಳ ಆಕರ್ಷಣೆಗಳಲ್ಲಿಯೇ ಪ್ರೇಮ ಪಲ್ಲವಿಸುತ್ತಿದ್ದವು. ಕಾಲೇಜುಗಳಲ್ಲಂತೂ ಪ್ರೇಮ ನಿವೇದನೆಗಳಿಗೆ ನಮ್ಮ ನೋಟ್ ಪುಸ್ತಕಗಳೇ ಪ್ರೇಮಾರಂಭಗಳ ಏಕೈಕ ರಾಯಭಾರಿಯಾಗಿದ್ದವು.

ಕಾಲೇಜಲ್ಲಿ ನಾನೂ ಒಬ್ಬಳ ಕಣ್ಸೆಳೆತಕ್ಕೆ ಬಿದ್ದಿದ್ದೆ. ಅವಳೂ ಸನ್ನೆಯಲ್ಲೇ ಹಸಿರು ನಿಶಾನೆ ತೋರಿಸಿದಂತಿತ್ತು. ಒಮ್ಮೆ ಅವಳು ನನ್ನ ಇಂಗ್ಲಿಷ್ ನೋಟ್‌ಬುಕ್ ಬೇಕೆಂದು ಕೇಳಿದ್ದಳು. ಬಹುಶಃ ನನ್ನಿಂದ ಪ್ರೇಮಪತ್ರ ಬಯಸಿದ್ದಾಳೆಂದು ನಿರ್ಧರಿಸಿ ಪ್ರಪ್ರಥಮ ಪ್ರೇಮ ನಿವೇದನೆಯ ರಚನೆಗೆ ಸಿದ್ಧನಾದೆ. ಹೃದಯದ ಢವಢವ, ಬಿಸಿ ಏದುಸಿರಲ್ಲಿ ರಾತ್ರಿಯೆಲ್ಲ ಏನೆಲ್ಲಾ ಪ್ರೇಮಭಾಷೆಗಳು ಹೊಳೆದರೂ ನಾನು ಬರೆದದ್ದು ಕಾವ್ಯ ವರ್ಣನೆಯಿಲ್ಲದ 'ಐ ಲವ್ ಯು'– ಒಂದೇ ಪ್ಯಾರಾದ ಬರಹ. ಆ ಪ್ರೇಮಪತ್ರವನ್ನು ರಹಸ್ಯವಾಗಿ ಬಿಗಿಭದ್ರತೆಯಲ್ಲೇ ನೋಟ್ ಪುಸ್ತಕದ ಮೇಲಿರಿಸಿ ಅದರ ಮೇಲೆ ಬೈಂಡ್ ಮಾಡಿ ಏಕಾಂತದಲ್ಲಿ ಸಂಧಿಸಿ 'ಇದರೊಳಗಿದೆ ಓದಿ' ಅಂತ ಹೇಳಿ ಗುರುತು ಮಾಡಿಯೂ ಕೊಟ್ಟಿದ್ದೆ.

ಆಗ ಅವಳು ನಕ್ಕೂ ನಗದಂಥ ಮನಸ್ಸಿಂದ ಪುಸ್ತಕವನ್ನು ಬ್ಯಾಗಿಗೆ ಸೇರಿಸಿದ್ದಳು. ಅವಳ ಆ ವರ್ತನೆ ಗಾಬರಿಗೂ ಎಡೆಮಾಡಿತ್ತು. ಇನ್ನು ಅವಳಿಂದ ಯಾವ ಮಾರುತ್ತರ ಬರುವುದೆಂದು ಕಾಯುತ್ತಾ ಕುಳಿತೆ. ಹತ್ತಾರು ದಿನಗಳಾದರೂ ಏನೂ ಬರಲಿಲ್ಲ. ದಿಗಿಲಾಗಿತ್ತು. ಒಂದು ದಿನ ಅವಳ ಸ್ನೇಹಿತೆ 'ತಗೊಳ್ರೀ ನಿಮ್ ನೋಟ್ ಬುಕ್ಕು, ಇದ್ರಲ್ಲಿ ಏನೂ ಇಲ್ವಂತೆ, ಯಾಕೋ ಕಾಲೇಜೂ ಬಿಟ್ಟಂತೆ' ಅಂದಾಗ ಸುಸ್ತಾಗಿದ್ದೆ. ನನ್ನ ಪ್ರೇಮಪತ್ರ ಅವಳಿಗೆ ಬಟವಾಡೆಯಾಗದೇ ಇದ್ದಲ್ಲೇ ಮಲಗಿ 'ಅನ್ ಡಿಲಿವರ್ಡ್ ಫಸ್ಟ್ ಲವ್ ಲೆಟರ್' ಆಗಿ ಮನಸ್ಸೂ ಮುದುಡಿತ್ತು.

–ಜಿ.ಹೆಚ್. ಸಂಕಪ್ಪ,
ಮೈಸೂರು

## ಬದುಕಿನ ಪರೀಕ್ಷೆ!



ಶಾಲಾ ಕಾಲೇಜಿನಲ್ಲಿ ನಮ್ಮ ಬುದ್ಧಿಮಟ್ಟ, ಜಾಣ್ಮೆಯನ್ನು ಮೌಲ್ಯಮಾಪನ ಮಾಡಲು ಪರೀಕ್ಷೆಗಳಿದ್ದಂತೆ, ಜೀವನದಲ್ಲಿಯೂ ನಮ್ಮ ಸಹನೆ, ಸಂಯಮ ಅಳೆಯಲು ಕೆಲವು ಸಂದರ್ಭಗಳು ಪರೀಕ್ಷೆಗಳಂತೆ ಬರುತ್ತವೆ. ಅನಿರೀಕ್ಷಿತವಾಗಿ ಒದಗುವ ಈ ಸಂದರ್ಭಗಳು ನಮ್ಮ ಬದುಕನ್ನು ಒರೆಗೆ ಹಚ್ಚುವುದಲ್ಲದೆ ನಮ್ಮ ಅಂತಃಶಕ್ತಿಯನ್ನೂ ಪರಿಚಯಿಸುತ್ತವೆ. ಹಿಂದೆಂದಿಗಿಂತಲೂ ಗಟ್ಟಿಯಾಗಿ ನಿಲ್ಲುವಂತೆ ಪ್ರೇರೇಪಿಸುತ್ತವೆ. ಇದುವರೆಗೂ ನಮಗೇ ಗೊತ್ತಿಲ್ಲದ ನಮ್ಮ ಕ್ಷಮತೆಯನ್ನು ತೆರೆದಿಡುತ್ತವೆ. ಊಹಿಸದಿರುವ ರೀತಿಯಲ್ಲಿ ಜೀವನದ ದಿಕ್ಕನ್ನೇ ಬದಲಾಯಿಸಿರುತ್ತವೆ. ಎಲ್ಲರ ಜೀವನದಲ್ಲಿಯೂ ಒಂದಲ್ಲಾ ಒಂದು ಬಾರಿ ಇಂಥ ಪರೀಕ್ಷೆ ಎದುರಾಗಿಯೇ ಇರುತ್ತದೆ. ಆ ಪರೀಕ್ಷೆ ಜೀವನಕ್ಕೆ ಅನಿರೀಕ್ಷಿತ ಗೆಲುವು, ತಿರುವನ್ನೇ ನೀಡಿರುತ್ತದೆ. ಹಾಗೆಯೇ ನಿಮ್ಮ ಬದುಕಿನಲ್ಲಿ ನಿಮಗೆ ಪರೀಕ್ಷಾ ಸಮಯ ಅನಿಸಿದ್ದು ಯಾವಾಗ? ಅದು ನಿಮ್ಮನ್ನು ಗೆಲ್ಲಿಸಿದ ಬಗೆ ಎಂಥದ್ದು? ನಿಮ್ಮ ಅನುಭವಗಳನ್ನು 'ಸುಧಾ'ದೊಂದಿಗೆ ಹಂಚಿಕೊಳ್ಳಿ. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಗಳ ಮಿತಿಯಲ್ಲಿರಲಿ. ಕೊನೆಯ ದಿನಾಂಕ **ಮಾರ್ಚ್** 12.
ಇಮೇಲ್– **editorsu@sudha.co.in**